International Journal of Kannada Research
www.kannadajournal.com

ISSN: 2454–5813
IJKR 2018; 4(3): 150-153
© 2018 IJKR
www.kannadajournal.com
Received: 27-05-2018
Accepted: 28-06-2018

**ಡಾ.ಶ್ವೇತಾರಾಣಿ, ಹೆಚ್**
ಅಥಿತಿ ಉಪನ್ಯಾಸಕಿ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ತುಮಕೂರು

**Correspondence**
**ಡಾ.ಶ್ವೇತಾರಾಣಿ, ಹೆಚ್**
ಅಥಿತಿ ಉಪನ್ಯಾಸಕಿ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ತುಮಕೂರು

# ಮಹಿಳಾ ಕಾವ್ಯ ಅಭಿವ್ಯಕ್ತಿ ನೆಲೆಗಳು ಅಂದು – ಇಂದು

**ಡಾ.ಶ್ವೇತಾರಾಣಿ, ಹೆಚ್**

"ಕಥೆ, ಕಾದಂಬರಿಯೇ ಈ ಇಪ್ಪತ್ತೈದು ವರ್ಷಗಳಲ್ಲಿ ಸಾಹಿತ್ಯ ಲೋಕವನ್ನು ಗೆದ್ದ ಸಾಹಿತ್ಯ ಪ್ರಕಾರಗಳಾದವು. ಕಾವ್ಯ ಪ್ರಕಾರದಲ್ಲಿ ತಮ್ಮನ್ನು ತೆರೆದುಕೊಂಡವರು ಗದ್ಯಕ್ಕಿಂತ ತುಂಬಾ ಕಮ್ಮಿ ಎಂದೇ ಹೇಳಬಹುದು. ಇಪ್ಪತ್ತರ ಸಂಖ್ಯೆಯಲ್ಲಷ್ಟೇ ಮಹಿಳೆಯರ ಕಾವ್ಯ ಬರೆದಿದ್ದರೆ, ಇದೇ ಯುಗದಲ್ಲಿ ಕಥೆ, ಕಾದಂಬರಿ ಬರೆದ ಮಹಿಳೆಯರ ಸಂಖ್ಯೆ ಸುಮಾರು ಇನ್ನೂರಕ್ಕೂ ಹೆಚ್ಚು. ಕಥನಕಲೆ ಮಹಿಳೆಯರನ್ನು ಆಕರ್ಷಿಸಿದಷ್ಟು ಕಾವ್ಯ ಕಲೆ ಆಕರ್ಷಿಸಲಿಲ್ಲ. ಹೇಳುವ ವಿಚಾರವನ್ನು ಸಂಕ್ಷಿಪ್ತವಾಗಿ ಕಾವ್ಯದ ಪರಿಕರಗಳಾದ ಪ್ರತಿಮೆ, ರೂಪಕ, ಸಂಕೇತಗಳ ಮೂಲಕ ಹೇಳಬೇಕೆಂದು ಕಾವ್ಯ ನಿರೀಕ್ಷಿಸುತ್ತದೆ. ನೇರವಾಗಿ ತಮ್ಮ ಭಾವನೆಗಳನ್ನು ದೀರ್ಘವಾಗಿ ನಿರೂಪಿಸುವುದನ್ನು ಪ್ರಯತ್ನಿಸುತ್ತಿದ್ದುದರಿಂದ ಮಹಿಳೆಯರು ಕಾವ್ಯಕ್ಕಿಂತ ಕಥನದತ್ತಲೇ ಆಕರ್ಷಿತರಾಗಿದ್ದಾರೆ". [೧] ಆದರೆ ಎಪ್ಪತ್ತರ ದಶಕದಲ್ಲಿ ಮಹಿಳೆಯರು ಕಾವ್ಯವನ್ನು ಪ್ರಮುಖ ಮಾಧ್ಯಮವಾಗಿ ಆಯ್ಕೆ ಮಾಡಿಕೊಂಡುರುವುದನ್ನು ಗಮನಿಸಬಹುದು.

ಪ್ರೇಮಾಭಟ್ ಮತ್ತು ಅವರ ಸಮಕಾಲೀನರು ಕಾವ್ಯ ಬರಹದಲ್ಲಿ ತೊಡಗಿಸಿಕೊಂಡಿದ್ದರೂ ಕಾವ್ಯದತ್ತ ಹೆಚ್ಚು ಗಮನ ನೀಡಿರಲಿಲ್ಲ. ಬೆರಳೆಣಿಕೆಯಷ್ಟು ಕವನ ಸಂಕಲನಗಳಿದ್ದರೂ ಅಭಿವ್ಯಕ್ತಿ ಮತ್ತು ಮೌಲ್ಯದ ದೃಷ್ಟಿಯಿಂದ ಮುಖ್ಯವೆನಿಸಿಕೊಳ್ಳುತ್ತವೆ. ಪ್ರೇಮಾಭಟ್ ಅವರಿಗಿಂತ ಮೊದಲು ಕಾವ್ಯ ರಚಿಸಿದ ಅಂದರೆ ನವೋದಯ ಕಾಲದಲ್ಲಿ ಸಾಹಿತ್ಯ ರಚಿಸಿದವರ ಕಾವ್ಯದಲ್ಲಿ ಪ್ರಮುಖವಾಗಿ ಭಕ್ತಿ ಹಾಗೂ ಪ್ರಕೃತಿ ಸೌಂದರ್ಯವನ್ನು ಗುರುತಿಸಬಹುದು. ಇದೇ ಲಕ್ಷಣಗಳನ್ನು ಪ್ರೇಮಾಭಟ್ ಅವರ ಕಾವ್ಯದಲ್ಲೂ ಕಾಣಬಹುದು. ಉತ್ತರ ಕನ್ನಡದ ಕರ್ಕಿ ಗ್ರಾಮದ ಪಾರ್ವತಿ ದೇವಿಯವರು 'ವೇಣಿ ಪುಷ್ಪ', 'ಸ್ತವರಾಜ', 'ನಿಸರ್ಗದ ಅಚಿಂತ್ಯ ಚಿಂತನ' ಎಂಬ ಕವನ ಸಂಕಲನಗಳನ್ನು ರಚಿಸಿದ್ದಾರೆ. ಇವರ ಕವನಗಳಲ್ಲಿ ನವೋದಯದ ಆದರ್ಶಗಳು ಹಾಸುಹೊಕ್ಕಾಗಿವೆ. ಇವರ ಕವನವೊಂದರಲ್ಲಿ ಪ್ರಕೃತಿ ವರ್ಣನೆ ಹೀಗಿದೆ:

> "ಮೈದೊಳೆದು ಗಂಗೆಯಲ್ಲಿ ಮನವೆಲ್ಲ ಮಡಿಯಾಗಿದೆ
> ಶರಣಾಗಿ ಬಂದಿಹುದು ಈ ಜೀವ ಭಾವ" [೨]

ಹಿಮಾಲಯದ ಸೌಂದರ್ಯವನ್ನು ಭಕ್ತಿ ಭಾವವನ್ನು ಈ ಕವಿತೆಯಲ್ಲಿ ಹಿಡಿದಿಟ್ಟಿದ್ದಾರೆ. ಅಂತೆಯೇ ಪ್ರೇಮಾಭಟ್ ಅವರ ಕವಿತೆಗಳಲ್ಲಿಯೂ ನಾವು ನಿಸರ್ಗದ ವರ್ಣನೆಯನ್ನು ಕಾಣಬಹುದು.

> "ಚಿತ್ತಾರ ಬಿಡಿಸುವ ಮುಂಗಾರು ಮೋಡವೆ
> ನಾಡಾಡಿ ಬಂದೆಯಾ ಅಂಬರದ ಒಳಗೆ
> ..........................................................
> ಮನಮನಕು ನಿನ್ನ ಆಗಮನ ತಂದಿತಲ್ಲ
> ಮುದವು" [೩]

'ಮುಂಗಾಳು ಮಳೆ' ಕವಿತೆಯಲ್ಲಿ ಮಳೆ ಇಳೆಯ ಸೊಬಗನ್ನು ವರ್ಣಿಸಿದ್ದಾರೆ. ಪ್ರಕೃತಿಯ ಬಗೆಗಿನ ಆರಾಧನ ಭಾವ ಇಲ್ಲಿ ವ್ಯಕ್ತವಾಗಿದೆ.

ಪುರಾಣ ಪಾತ್ರವಾದ 'ಅಹಲ್ಯೆ'ಯನ್ನು ಕುರಿತು ಪಾರ್ವತಿದೇವಿಯವರು

"ತಪ್ಪೊ ಒಪ್ಪೋ ಹೇಳುವುದೆಂತೋ?
ಅಹಲ್ಯೆ ಜಾರಿದಳು
ಸುರುಪ ಮತಿಹೀನನಾದ
ಮರಳಲ್ಲಿ ಬಿದ್ದಳು"(ಅದೇ ಪು.೩೦೭)

ಈ ಕವಿತೆಯಲ್ಲಿ ಅವಳು ಶೋಷಣೆಗೆ ಒಳಗಾದ ಬಗೆಯನ್ನು ಚಿತ್ರಿಸಿದ್ದಾರೆ. ಗಂಡು ತಪ್ಪಿತಸ್ಥನೆನಿಸಿಕೊಳ್ಳದೆ ಹೆಣ್ಣಿನ ಕಡೆಗೆ ಬೊಟ್ಟು ಮಾಡುವ, ನಿಂದಿಸುವ ಪ್ರವೃತ್ತಿ ತೆರೆದಿಟ್ಟಿದ್ದಾರೆ. ಪ್ರೇಮಾಭಟ್ ಅವರು "ರೇಣುಕೆ"ಯ ಪಾತ್ರದಲ್ಲೂ ಇದನ್ನು ಚಿತ್ರಿಸಿದ್ದಾರೆ.

"ಮಾಡಿದ್ದೇನು ತಪ್ಪು ರೇಣುಕೆ
ಮಾಡಬಾರದ್ದೇನಲ್ಲ ಮನಸಿಜನ
ಮರೆತು ನೆನದಳೊಂದು ಕ್ಷಣ
ಕಾರ್ತವೀರ್ಯನ ಚಂದ್ರ ಬಿಂಬದಲಿ
ಕಾಮುಕರಿರಲು ಜಗದೊಳಗೆ
ಮಾನಿನಿ ಮಾಡಿದ ಸಣ್ಣ ತಪ್ಪಿಗೆ
ಶೋಷಣೆಯಲಿ ಜೀವಕೆ ಬೆಲೆತೆರದೆ"
[ಆ ಕಾಲ ಈ ಕಾಲ ಎಲ್ಲಾ ಕಾಲ ಒಂದೆ ಪು.ಸಂ. ೧೦.೧೧]

ತನ್ನೊಬ್ಬಳದೇ ಅಲ್ಲದ ತಪ್ಪಿಗೆ ರೇಣುಕೆ ಬಲಿಯಾಗಬೇಕಾದ ವ್ಯವಸ್ಥೆಯ ಕ್ರೌರ್ಯವನ್ನು ಈ ಕವಿತೆ ನಿವೇದಿಸುತ್ತದೆ.
ಲೈಂಗಿಕತೆಯ ವಿಚಾರದಲ್ಲಿ ಹೆಣ್ಣಿಗೆ ಅದನ್ನು ಪ್ರತಿನಿಧಿಸುವ ಅಥವಾ ಹೇಳುವ ಸ್ವಾತಂತ್ರ್ಯದ ವಿಚಾರದಲ್ಲಿ ಪ್ರೇಮಾಭಟ್ ಅವರು ಭಿನ್ನರೆನಿಸಿಕೊಳ್ಳುತ್ತಾರೆ. 'ಮಾಡಿದ್ದೇನು ತಪ್ಪು ರೇಣುಕೆ ಎಂದು ಪ್ರಶ್ನಿಸುವಲ್ಲಿ ದಿಟ್ಟತನವನ್ನು ಕಾಣಬಹುದು.
ಇಂದುಮತಿ ವಿಭೂತಿಯವರು ೧೯೬೮ರಲ್ಲಿ ತಮ್ಮ 'ಜೀವನ ರಥ' ಕವನ ಸಂಕಲನವನ್ನು ರಚಿಸಿದ್ದಾರೆ. ಹೆಣ್ಣಿನ ಜೀವನ ಕುರಿತ ಕವನ ಹೀಗಿದೆ:

"ಹೆಣ್ಣಿನ ಬಾಳ ನೀತಿಯಲಿ
ಹೆಣ್ಣು ಜೀವನ ಮಾಡಲಿ ಬೇಕ
ಹಡೆದವರ ಹೊರತಾಗಿ ಒಡಯನ ಮಡದ್ಯಾಗಿ
ಮನ ಮತಗಳ ನೆಲಸಿ ನಲಿಸಿ ನಿಲಿಸಬೇಕು"

ಪರಂಪರಾಗತ ಮೌಲ್ಯಗಳನ್ನು ಹೆಣ್ಣು ಅನುಸರಿಸಿ ಜೀವನ ನಡೆಸಬೇಕು. ಹೆಣ್ಣು ಇತರರ ಕ್ಷೇಮದಲ್ಲಿಯೇ ತನ್ನ ಸುಖವನ್ನು ಕಾಣಬೇಕೆಂಬ ನಿಲುವಿದೆ. ಅಂತೆಯೇ ಪ್ರೇಮಾಭಟ್ ಅವರು ಕವಿತೆಯಲ್ಲಿ ಒಪ್ಪಿತ ಮೌಲ್ಯಗಳ ಸ್ತ್ರೀಯ ಬದುಕಿನ ನೋವು ಮತ್ತು ದುಃಖ ದುಮ್ಮಾನಗಳನ್ನು ತೆರೆದಿಟ್ಟಿದ್ದಾರೆ.

"ಹೆತ್ತವರೊಪ್ಪುವಂತೆ ನಡೆದಳು
ಅತ್ತೆ ಮಾವರಿಗೊಪ್ಪುವಂತೆ ಸೊಸೆ
ಹತ್ತು ಮಕ್ಕಳ ಹೆತ್ತು ಸುಖವ ಕೊಟ್ಟಳು ಪತಿಗೆ
ಮರೆತು, ಬದುಕಿದಳು ತನ್ನ ಸುಖವ
[ಅದೇ, ಆ ಕಾಲ ಈ ಕಾಲ ಎಲ್ಲ ಕಾಲ ಒಂದೇ.. ಪು.ಸಂ. ೭]

ಸ್ತ್ರೀಯ ಬದುಕಿನ ನೋವಿನ ಒಳಸುಳಿಗಳನ್ನು ತೆರೆದಿಡುವಲ್ಲಿ ಪ್ರೇಮಾಭಟ್ ಯಶಸ್ವಿಯಾಗಿದ್ದಾರೆ. ಕನ್ನಡದ ಸ್ತ್ರೀ ಸಾಹಿತ್ಯಕ್ಕೆ ಹೊಸ ರೂಪ, ಮೆರುಗು, ತಿರುವು ನೀಡಿದ ಕವಯತ್ರಿ ವಿಜಯಾದಬ್ಬೆಯವರು. ಇವರ 'ಇರುತ್ತವೆ' ಕವನ ಸಂಕಲನದ 'ಪಾಪ, ನೀವು ಹೊಣೆಯಲ್ಲ' ಕವಿತೆಯಲ್ಲಿ

"ಈಗಲೂ
ನನಗೆ ಆ ಕ್ಷಣ ಕೊನೆಯಲ್ಲಿ
ಕಾಣುವುದು ಬರೀ
ಬೇಕಿನ ಸೂಜಿಮನೆ
ನಿಷ್ಠ ಉಷ್ಣಕ್ಕೇ
ಕರಗಿ ನೀರಾಗಿ ಹರಿವ
ಕರ್ಪೂರದ ಗೊಂಬೆ
'ಸಾಧಾರಣೀಕರಣ'
ಪಾಪ ನೀವು ಹೊಣೆಯಲ್ಲ" [೪]

ಅವಳ ಅಳುವನ್ನು ಅಸಡ್ಡೆಯಿಂದ ಕಾಣುವ ವ್ಯವಸ್ಥೆಯ ವಿಡಂಬನೆ ವ್ಯಂಗ್ಯವನ್ನು ಚಿತ್ರಿಸಿದ್ದಾರೆ. ಆದರೆ ಪ್ರೇಮಾಭಟ್ ಅವರದು ತಣ್ಣಗಿನ ಪ್ರತಿಕ್ರಿಯೆ.

"ಯಾರ ಶಾಪವೋ ಏನೋ
ನೂರು ಬಗೆಯ ನೋವು
ಹರಿಯಿತೊಂದು ಕ್ಷಣದಲ್ಲಿ ಕೂಸ ಮುಖ ಕಂಡು"
[ಅದೇ ಸೂತ್ರಧಾರಿಯ ಲೋಕತತ್ವ ಪು.ಸಂ.೮]

ಅವಳ ನೋವು ಅವಳಲ್ಲಿಯೇ ಅಸ್ತಂಗತವಾಗುವುದು. ನೋವು ಮರೆಯಲು ಅವಳು ಮಕ್ಕಳಲ್ಲಿ ದಾರಿ ಕಂಡುಕೊಂಡಿರುವ ಬಗೆಯ ಚಿತ್ರಣವಿದೆ.
ಕಾವ್ಯ ಬರವಣಿಗೆಯ ಹವ್ಯಾಸಕ್ಕಿಂತ ಮಹಿಳೆಯರು ಅದನ್ನು ತಮ್ಮ ಮನಸ್ಥಿತಿಯನ್ನು ಪ್ರಕಟಿಸುವ ಮಾಧ್ಯಮವಾಗಿಸಿಕೊಂಡರು. "ಕವಿತೆಗಳ ವಸ್ತುವನ್ನು ಹಾಗೂ ಅದರಲ್ಲಿ ತೊಡಗಿದವರನ್ನು ನೋಡಿದರೆ ಈ ಅಂಶ ಇನ್ನು ಸ್ಪಷ್ಟವಾಗುತ್ತದೆ. ಎಷ್ಟೋ ಕವಯತ್ರಿಯರು ಹೇಳಿಕೊಂಡಿರುವಂತೆ ಅವರು ಕವಿತೆ ಬರೆಯುವುದು ತಮ್ಮ ನೋವಿನ ಒತ್ತಡಗಳಿಂದ ಬಿಡುಗಡೆ ಪಡೆಯಲು ಹಾಗೂ ತಮ್ಮ ನೋವು ಹಾಗೂ ವಿಷಾದಗಳಿಗೆ ದನಿಕೊಡಲು; ತಾವು ಯಾರಿಗೂ ಹೇಳಿಕೊಳ್ಳಲಾಗದ ತಲ್ಲಣಗಳನ್ನು, ಅನುಭವಗಳನ್ನು ಕವಿತೆಯ ರೂಪದಲ್ಲಿ ಹೊರಗೆಡವಿದ್ದಾರೆ. ಆರಂಭದ ಬಹುಪಾಲು ಕವಿತೆಗಳು ನಿಟ್ಟುಸಿರಿನ, ನೋವಿನ, ಅಸಹಾಯಕತೆ, ಬೇಗುದಿ, ತಲ್ಲಣಗಳ ಅಭಿವ್ಯಕ್ತಿಯಾಗಿರುವುದು ಈ ಕಾರಣಕ್ಕಾಗಿಯೇ ಇರಬೇಕು. ಕವಿತೆಯ ರಚನೆಗಾಗಿ ಅವರು ಬಳಸಿಕೊಂಡ ತಂತ್ರ ಹಾಗೂ ನಿರೂಪಣೆಯ ಶೈಲಿ, ಧಾಟಿಗಳು ಸಹ ಇದೇ ಅಂಶವನ್ನು ಸಮರ್ಥಿಸುತ್ತವೆ" [೫]. ಅಂತೆಯೇ ಪ್ರೇಮಾಭಟ್ ಅವರ ಕವಿತೆಗಳಲ್ಲಿ ಸ್ತ್ರೀ ಅಸಹಾಯಕತೆಯ ಸ್ಥಿತಿ, ಅವಳ ನೋವು, ತಲ್ಲಣಗಳು ನಿಟ್ಟುಸಿರನ್ನು ಕಾಣಬಹುದು. ಬಿ.ಟಿ. ಲಲಿತಾನಾಯಕ್ ಅವರ 'ವೇದಾವತಿ ನದಿಯಲ್ಲಿ ಮುಳುಗಿದ ಸೂಳೆ' ಕವನದಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣನ್ನು ಸೂಳೆಯಾಗಿಸಿ ಅವಳ ಯೌವ್ವನವನ್ನು ಕಸಿದುಕೊಂಡು, ಸುಖಿಸಿ ಬಿಸಾಡಿದ ಪರಿಯ ಚಿತ್ರಣವಿದೆ.

ಎಡಗೈಲಿ ಶರಾಬು ಶೀಸೆ ಬಲಗೈಲಿ ಸಿಗರೇಟು ಹಿಡಿದು
ರಂಗೇರಿ ಕುಣಿದು ಕುಣಿಸಿ ದಣಿಸಿ ಫಾರಿನ್ನರನ್ನೂ

ನಾಚಿಸಿದವರು ......
ಎಲ್ಲಾ ಹೆಂಗಸರಂತೆ ಆ ಸೂಳೆಯರಿಗೂ
ಬಂತು ನೋಡಿ ಒಮ್ಮೆ ಮುದಿತನ
ಗಳಿಸಿದ್ದೆಲ್ಲ ಅದು ಹೇಗೋ ಯೌವನದ ಜೊತೆಗೇ
ಮಂಗಮಾಯ!
ದಿಕ್ಕಿಲ್ಲ ದೆಸೆಯಿಲ್ಲ ಒಲವಿನ ಬಲವಿಲ್ಲ
ಭೋಗಿಸಿದ್ದ ಮುದಿ ಮಿಂಡರು ಸಂಪನ್ನರಲ್ಲಿ ಸಂಪನ್ನರಾಗಿ
ಪೂಜ್ಯಶ್ರೀಗಳಾಗಿ ಅಲಾದಿ ಉಳಿದರು
ಈ ಮುದುಕಿಯರಿಗೋ ನೆಲೆ ಇಲ್ಲ ಬೆಲೆ ಇಲ್ಲ
ಕೆದರುತಲೆ ಸೀಕಲು ದೇಹ ಸುಕ್ಕು ಮೋರೆ ಗುಣಿ ಕಣ್ಣು
ಹಸಿವು ದಾರಿದ್ರ್ಯ, ಎಲ್ಲಾದಕ್ಕೂ ಮೀರಿದ ಸಾಮಾಜಿಕ
ತಿರಸ್ಕಾರ ಬೇರೆ" ಊರುಜ್ಜಿದೊಳು ಥೂ!" [೬]

ವ್ಯವಸ್ಥೆಯೊಳಗೆ ಹೆಣ್ಣು ನಲುಗಿದ ಬಗೆಯನ್ನು ಲಲಿತಾ ನಾಯಕ್ ಅವರು ಚಿತ್ರಿಸಿದರೆ, ಪ್ರೇಮಾಭಟ್ ಅವರು ಸಂಸಾರದ ಒಳಗೆ ನಲುಗಿದ, ಸಂಸಾರಕ್ಕಾಗಿ ಜೀವ ಸವೆಸಿದ, ಗಂಡ ಮಕ್ಕಳಿಂದ ಮುದಿತನದಲ್ಲಿ ತಿರಸ್ಕೃತಗೊಂಡ ಹೆಣ್ಣಿನ ಚಿತ್ರಣ ನೀಡುತ್ತಾರೆ.

"ತಟ್ಟುವಳು ರೊಟ್ಟಿ
ಇದ್ದೊಬ್ಬ ಮಗನ ಭವಿಷ್ಯ ಬಾಗಿಲು
ತೆರೆಯುವನೆಂದು
ತಟ್ಟುವಳು ರೊಟ್ಟಿ
ದೋಚುತ್ತ ದೋಚುತ್ತ ಅವನು
ಅವಳನ್ನು ಬೆತ್ತಲಾಗಿಸುತ್ತ ನಡೆದ
................................................
ಬಟ್ಟಬಯಲಲ್ಲಿ ಬಿಟ್ಟು ಹೋದವನ ಕಥೆ"
(ಅದೇ ಗಂಗಾಳದೊಳಗೊಂದು ಗೂಡು, ಪುಟ. ೨೯)

ಇಲ್ಲಿನ ಚಿತ್ರಣ ಲಂಕೇಶ್ 'ಅವ್ವ' ಕವಿತೆಯಲ್ಲಿನ

"ಸತ್ತಳು ಈಕೆ
ಬಾಗು ಬೆನ್ನಿನ ಮುದುಕಿಗೆಷ್ಟು ಪ್ರಾಯ"(ಅದೇ, ಪುಟ. ೧೬೫)

ಎಂಬ ಸಾಲುಗಳಲ್ಲಿನ ವರ್ಣನೆಗೆ ಸಮೀಪವಾದ ಚಿತ್ರಣವಾಗಿದೆ. ಹೆಣ್ಣಿನ ಶ್ರಮ ಜೀವನ ಕುರಿತ ಎರಡು ಭಿನ್ನ ದೃಷ್ಟಿಕೋನಗಳಿವೆ. ಆದರೆ ವಸ್ತು, ಶ್ರಮ ಜೀವನದಲ್ಲಿ ಅವಳು ನೋವನ್ನು ನುಂಗಿ ತ್ಯಾಗಿಯಾಗಿ ಬದುಕುವ ಜೀವನ ಕಟ್ಟಿಕೊಡುತ್ತದೆ. ನಿರೂಪಣೆಯ ದೃಷ್ಟಿಯಿಂದ ಲಂಕೇಶ್ ಮತ್ತು ಪ್ರೇಮಾಭಟ್ ಭಿನ್ನರಾಗಿ ನಿಲ್ಲುತ್ತಾರೆ. ವೈದೇಹಿಯವರ "ಗೆಳತಿಯ ಗುಟ್ಟು" ಕವಿತೆಯಲ್ಲಿ

"ಆದರೂ .............
ಪ್ರಿಯಕರನೆ ಇಲ್ಲದ ಬದುಕು ಬದುಕೇನು?
ಎಂದಳಜ್ಜಿಗೆ ಆ ಕೆಟ್ಟ ಗೆಳತಿ
ಎನ್ನಬಹುದೇ ಹಾಗೆ
ನನ್ನ ಗೆಳತಿ" (ಅದೇ, ಪುಟ. ೨೦೧)

ಪ್ರೀತಿ, ಪ್ರೇಮದ ವಿಚಾರಗಳಲ್ಲೂ ಮಡಿವಂತಿಕೆಯ ವಿಚಾರವೆನಿಸಿದ್ದ ಸಂದರ್ಭದ ಅದೇ ವಿಚಾರ ಕುರಿತು ಬರೆದ ವೈದೇಹಿಯರ ದಿಟ್ಟತನ, ಪರಂಪರೆಯ ವಿಡಂಬನೆ ಇದೆ. 'ಅಡಿಗೆ ಮನೆ' ಸಾಹಿತ್ಯ ಎಂದು ಹೀಗಳೆದವರಿಗೆ 'ತಿಳಿದವರೇ ........... ಹೇಳಿ'

"ಕಾವ್ಯದ ಬಗ್ಗೆ ತಿಳಿದವರೇ
ಹೇಳಿ, ನನಗೆ ಕಾವ್ಯ ಗೊತ್ತಿಲ್ಲ
ತಿಳಿಸಾರು ಗೊತ್ತು"(ಅದೇ, ಪುಟ. ೨೦೪)

ಕಾವ್ಯದ ಮೂಲಕ ಚಾಟಿ ಬೀಸುವ ಛಾತಿಯನ್ನು ಕಾಣಬಹುದು. ಪ್ರತಿಭಾನಂದಕುಮಾರ್ ಅವರು "ನಾವು ಹುಡುಗಿಯರೇ ಹೀಗೆ ....." ಕವಿತೆಯಲ್ಲಿದೆ.

"ಏನೇನೋ ವಟಗುಟ್ಟಿದರೂ
ಹೇಳಬೇಕಾದ್ದನ್ನು ಹೇಳದೆ
ಏನೇನೆಲ್ಲಾ ಅನುಭವಿಸಿ ಸಾಯುತ್ತೇವೆ
ಜುಮ್ಮೆನ್ನಿಸುವ ಆಲೋಚನೆಗಳನ್ನೆಲ್ಲಾ
ಹಾಗೇ ಡಬ್ಬಿಯೊಳಗೆ ಹಿಟ್ಟು ಒತ್ತಿದಂತೆ
..................................................
'ಐ ಲವ್ ಯೂ' ಅಂತ ಹೇಳಲು ಕಷ್ಟಪಟ್ಟು" (ಅದೇ, ಪುಟ. ೨೫೦)

ಈ ಕವಿತೆಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವ ಸ್ತ್ರೀಯ ಅಧೈರ್ಯವಿದೆ. ಪ್ರೇಮಾಭಟ್ ಅವರ ಕಾವ್ಯದಲ್ಲಿ ಸ್ತ್ರೀ ಮನೋಭಿಲಾಷೆಯನ್ನು ನೇರವಾಗಿ ವ್ಯಕ್ತಪಡಿಸಿದೆ. ರಾಧಾ – ಕೃಷ್ಣರ ಪ್ರತಿಮೆಯ ಮೂಲಕ ಆರೋಪಿಸಿ ಹೇಳುವ ಬಗೆಯಿದೆ. ನೇರವಾಗಿ ಹೇಳುವ ಧ್ವನಿ ಇಲ್ಲದೆ ಹೋದರೂ 'ಮದುಮಗಳು' ಕವನದಲ್ಲಿ ಅವಳ ಭಾವನೆಗಳನ್ನು, ಕನಸು, ಸ್ವಗತದ ಮಾದರಿಗಳಲ್ಲಿ ದಾಖಲಿಸಿದ್ದಾರೆ. ಆದರೆ ಪ್ರತಿಭಾ ಅವರ ಕಾವ್ಯದಲ್ಲಿ ಮುಕ್ತ ಅಭಿವ್ಯಕ್ತಿಯನ್ನು ಕಾಣುತ್ತೇವೆ. ಸಾಮಾನ್ಯ ಸ್ತ್ರೀಯೋರ್ವಳು ಪುರುಷನಿಗೆ ಪ್ರೇಮ ನಿವೇದನೆ ಮಾಡಬಾರದು ಎಂದಿದ್ದ ಭಾವನೆ ಹೋಗಿ ಹೆಣ್ಣು ತನ್ನ ಪ್ರೇಮವನ್ನು ಹೇಳಿಕೊಳ್ಳುವ ಸಾಧ್ಯತೆಯನ್ನು ತೆರೆದಿಟ್ಟಿದ್ದಾರೆ. ಆದರೆ ಪ್ರೇಮಾಭಟ್ ಅವರ ಕಾವ್ಯದಲ್ಲಿ ರಾಧೆ, ದಮಯಂತಿ ಇವರೇ ಮುಂತಾದ ದೇವತಾ ಸ್ತ್ರೀಯರ ಮೂಲಕ ಪ್ರೇಮ ನಿವೇದನೆ ಕಾಣಬಹುದು. ಪ್ರೀತಿಯ ವಿಚಾರದಲ್ಲಿ ಮುಕ್ತ ಅಭಿವ್ಯಕ್ತಿಯ ಕೊರತೆ ಕಾಣುತ್ತದೆ.
ಸ. ಉಷಾ ಅವರ ಕವಿತೆ 'ಈ ನೆಲದ ಹಾಡಿ'ನಲ್ಲಿ ಹೀಗಿದೆ.

"ಹೇಳು ಗೆಳೆಯ
ನಿನಗನ್ನಿಸುವುದಿಲ್ಲವೇ
ನಿನ್ನ ಕನಸಿಗೆ ನಾನು ಬಣ್ಣಯಿರಬಹುದೆಂದು
ನನ್ನ ಕನಸಿನ ಹಾಡು
ಕೇಳಿ
ನೀ ಹಗುರಾಗಬಹುದೆಂದು.

ಪುರುಷರಂತೆಯೇ ತಾವು ಬರೆಯಬೇಕೆಂಬ ಭಾವನೆಯನ್ನು ಬಿಟ್ಟುಕೊಟ್ಟು ಪುರುಷರಂತೆ ತಾವು ಸ್ವತಂತ್ರವಾಗಿ ಬರೆಯಲು ಮಹಿಳೆಯರು ಪ್ರಾರಂಭಿಸಿದ ನಂತರ ಅವರ ಕಾವ್ಯಪಕ್ಷಿ ರೆಕ್ಕೆ ಬಿಚ್ಚಿ ಹಾರಲಾರಂಭಿಸಿದೆ. ಈ ಹೊಸ ಆತ್ಮವಿಶ್ವಾಸ ಪಂಜರದಿಂದ ಹೊರಕ್ಕೆ ಬಂದಾಗ ಸಹಜವಾಗಿ ಪುನರಾವೃತ್ತಿ, ಸರಳೀಕರಣ, ಬರಿಯ ರೋಷ ಕಂಡಿತು. ಆದರೆ ಈಚೆಗೆ ಎಚ್.ಎಲ್. ಪುಷ್ಪಾ, ಸುಕನ್ಯಾ ಮಾರುತಿ, ಚ. ಸರ್ವಮಂಗಳ, ಸ. ಉಷಾ, ಎಂ.ಆರ್. ಕಮಲ ಮೊದಲಾದವರು ಬರೆಯುತ್ತಿರುವ ಹಲವು ಕವನಗಳಲ್ಲಿ ಪ್ರತಿಭಟನೆಯ ಸಂಗತಿಗಳಿವೆ. ಇವರು ರಾಮಾಯಣ, ಮಹಾಭಾರತ, ಅಹಲ್ಯೆಯ ಕಥೆ, ಶಕುಂತಲೆಯ ಕಥೆ ಮೊದಲಾದ

ಪೌರಾಣಿಕ ಸಾಮಗ್ರಿಯನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾರೆ" ೭ ಆದರೆ ಪ್ರೇಮಾಭಟ್ ಅವರ ಕಾಲಘಟ್ಟದಲ್ಲಿ ಸಂದರ್ಭಕ್ಕೆ ಅವರ ಕಾವ್ಯದಲ್ಲಿರುವ ಪ್ರತಿಭಟನೆ ಪ್ರಗತಿಶೀಲವಾದದ್ದು. ಇವರೂ ಸಹ ಸೀತೆ, ದ್ರೌಪದಿಯರ ಪಾತ್ರಗಳನ್ನು ತಮ್ಮ ಕಾವ್ಯದಲ್ಲಿ ಸಶಕ್ತವಾಗಿ ರೂಪಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


1. ಎಚ್.ಎಸ್.ಶ್ರೀಮತಿ, ಪೂ. ಪು. ೩೦೩
2. ಎಚ್.ಎಸ್.ಶ್ರೀಮತಿ, ಪೂ. ಪು. ಸಂ. ೩೦೩.
3. ಗಂಗಾಳದೊಳಗೊಂದು ಗೂಡು ಪು.ಸಂ.೮
4. ವಿಜಯಾದಬ್ಬೆ ಸಮಗ್ರ ಸಾಹಿತ್ಯ ಸಂಪುಟ ೩ ಇರುತ್ತವೆ. – ಸಂ.ಡಾ.ಎಸ್.ಡಿ ಶಶಿಕಲಾ ಅಪರಂಜಿ ಪ್ರಕಾಶನ ೨೦೧೨, ಪು. ೨೭.
5. ಪೂ., ಎಚ್.ಎಸ್. ಶ್ರೀಮತಿ, ಪು. ಸಂ. ೩೮೬.
6. ಅಕ್ಷರ ಹೊಸ ಕಾವ್ಯ –ಸಂ. ಪಿ. ಲಂಕೇಶ್, ಅಕ್ಷರ ಪ್ರಕಾಶ, ಹೆಗ್ಗೋಡು, ಪ್ರಮುಲು. ೧೯೮೦, ಪು. ಸಂ. ೨೮೩, ೨೮೪.
7. ಹೊಸಗನ್ನಡ ಸಾಹಿತ್ಯ ಚರಿತ್ರೆ – ಪ್ರೊ. ಎಲ್.ಎಸ್. ಶೇಷಗಿರಿರಾವ್, ಕರ್ನಾಟಕ ಬುಕ್ ಏಜೆನ್ಸಿ, ನಂ. ೧೧, ೨ ನೆ ಮಹಡಿ, ೩ ನೆ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು, ಹದಿಮೂರನೇ ಮುದ್ರಣ, ೨೦೧೩, ಪು. ಸಂ. ೨೩೪–೨೩೫.